401 (820) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ನಗರ ಹಾಗೂ ಗ್ರಾಮಾಂತರ ಮತ್ತು ವಿಟ್ಲ ಪೊಲೀಸ್ ರಾಣೆಗಳಲ್ಲಿ ಕೊರತೆ ಇರುವ ಸಿಬ್ಬಂದಿ ವರ್ಗಗಳ ಸಂಖ್ಯೆ ಎಷ್ಟು, ಅವುಗಳಲ್ಲಿ ಮಹಿಳಾ ಸಿಬ್ಬಂದಿ ವರ್ಗದ ಖಾಲಿ ಹುದ್ದೆಗಳೆಷ್ಟು,

ಆ) ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವುದೆ,

ಇ) ಬಂಟ್ವಾಳ ತಾಲ್ಲೂಕಿನ ಕೇರಳ ರಾಜ್ಯದ ಗಡಿ ಪ್ರದೇಶಗಳಲ್ಲಿ ಇರುವ ಪೊಲೀಸ್ ಚೆಕ್ ಪೋಸ್ಟ್ ಗಳೆಷ್ಟು? (ಆವುಗಳ ವಿವರ ಒದಗಿಸುವುದು),

ಈ) ಅಗತ್ಯತೆಗನುಗುಣವಾಗಿ ಅವುಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಉ) ಸೂಕ್ಷ್ಮ ಗಡಿ ಪ್ರದೇಶಗಳಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಇತರ ಪ್ರಮುಖ ವಿಚಾರಗಳಲ್ಲಿ ನಿಗಾ ವಹಿಸಲು ಸರ್ಕಾರದ ವಿಶೇಷ ಕಾರ್ಯಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂಟ್ವಾಳ ನಗರ ಹಾಗೂ ಗ್ರಾಮಾಂತರ ಮತ್ತು ವಿಟ್ಲ ಪೊಲೀಸ್ ರಾಣೆಗಳಲ್ಲಿ ತೆರವು ಇರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ

ರಾಣೆಯ ಹೆಸರು	ಪಿ ಎಸ್ ಐ	ಎ ಎಸ್ ಐ	ಹೆಚ್ ಸಿ	ಮ ಹೆಚ್ ಸಿ	ಸಿ ಪಿ ಸಿ	ಮ ಪಿ ಸಿ
ಬಂಟ್ವಾಳ ನಗರ	01	02	–	–	01	–
ಬಂಟ್ವಾಳ ಗ್ರಾಮಾಂತರ	–	–	–	–	–	–
ವಿಟ್ಲ	–	01	01	–	01	–
ಒಟ್ಟು	01	03	01	–	02	–

ಆ) ಈ ಮೇಲಿನ ಪೊಲೀಸ್ ರಾಣೆಗಳಲ್ಲಿ ತೆರವು ಇರುವ ಎ ಎಸ್ ಐ/ಹೆಚ್ ಸಿ ಹುದ್ದೆಗಳನ್ನು ಮುಂಬಡ್ತಿಯಲ್ಲಿ ತುಂಬಲು ಕ್ರಮ ಜರುಗಿಸಲಾಗುತ್ತಿದೆ ಹಾಗೂ ತೆರವು ಇರುವ ಸಿ ಪಿ ಸಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಪ್ರಕ್ರಿಯೆ ನಡೆದಿರುತ್ತದೆ

ಇ) ಬಂಟ್ವಾಳ ವೃತ್ತದ ವಿಟ್ಲ ರಾಣಾ ಸರಹದ್ದಿನ ಕೇಪು ಗ್ರಾಮದ ಸಾರಡ್ಯ ಎಂಬಲ್ಲಿ ಕಲ್ಲಡ್ಕ–ಕಾಂಗಾಡ್ ರಾಜ್ಯ ಹೆದ್ದಾರಿ 88 "ಸಿ" ಯಲ್ಲಿ ಪೊಲೀಸ್ ಚೆಕ್ ಪೋಸ್ಟ್ ಇರುತ್ತದೆ ಈ ಚೆಕ್ ಪೋಸ್ಟ್ ಗೆ ವಿಟ್ಲ ರಾಣೆಯಲ್ಲಿ ಲಭ್ಯವಿರುವ ಸಿಬ್ಬಂದಿ ಬಲದಿಂದಲೇ ಸಿಬ್ಬಂದಿ ನಿಯೋಜಿಸಿಕೊಂಡು ಈ ಚೆಕ್ ಪೋಸ್ಟ್ ನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ

ಈ) ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ

ಉ) ಸೂಕ್ಷ್ಮ ಹಾಗೂ ಗಡಿ ಪ್ರದೇಶಗಳಲ್ಲಿ ನಿಗಾ ವಹಿಸುವ ಬಗ್ಗೆ ಪೋಲಿಸ್ ರಾಣೆಯ ಸಿಬ್ಬಂದಿಯನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿ ಅವರಿಂದ ಎಲ್ಲಾ ವಾಹನಗಳ ತಪಾಸಣೆ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗಿದೆ

402 (828) ಶ್ರೀ ಪಾಟೀಲ್ ಡಿ ಆರ್ (ಗದಗ್) . ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ–ಬಿಜಾಪೂರ ಬ್ರಾಡ್‌ಗೇಜ್ ಪರಿವರ್ತನೆಗೆ ಬೇಕಾಗುವ ಅಂದಾಜು ಹಣ ಎಷ್ಟು,

ಆ) ಇದರಲ್ಲಿ ರಾಜ್ಯ ಸರಕಾರದ ಪಾಲೆಷ್ಟು,

ಇ) ಈ ಯೋಜನೆಗೆ ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾದ ಹಣ ಎಷ್ಟು (ವರ್ಷಾವಾರು ವಿವರ ನೀಡುವುದು),

ಈ) ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಗದಗ–ಬಿಜಾಪುರ ಬ್ರಾಡ್ ಗೇಜ್ ಪರಿವರ್ತನೆಗೆ ರೂ 404 ಕೋಟಿಗಳು ಬೇಕಾಗುವುದೆಂದು ಅಂದಾಜಿಸಲಾಗಿದೆ